**ಸಾಕ್ಷಿಯನ್ನು ದಿನಾಂಕಃ 18-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**<u>ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ</u>**

ನಾನು ಶಾಲೆ ಕಲಿತಿರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಅಂದರೆ ಸರಿ. ಈ ಕೇಸನ್ನು ಶಾಂತವೀರ ನಾಯ್ಕು ರು ಬೊಜ್ಯ ನಾಯ್ಕು ಇವರ ವಿರುದ್ದ ಹಾಕಿರುವರು. ಈ ದಾವೆಯನ್ನು ಸರ್ವೆ ನಂ 1 ಕ್ಕೆ ಸಂಬಂದಿದಂತೆ ದಾವೆ ಹಾಕಿರುವರು. ಈ ದಾವೆಯನ್ನು ವಾದಿ ಸರ್ವೆ ನಂ 1/ಪಿ162 ಕ್ಕೆ ಸಂಬಂದಿದಂತೆ ಹಾಕಿರುವರು ಅಂದರೆ ಸರಿಯಲ್ಲ.

ದಾವಾ ಅಸ್ತಿಯ ಪೂರ್ವಕ್ಕೆ ಹಿರ್ಯನಾಯ್ಕು ರ ಹೊಲ, ಪಶ್ಚಿಮಕ್ಕೆ ಲಚ್ಚಾನಾಯ್ಕು ನ ಹೊಲ, ಉತ್ತರಕ್ಕೆ ಪರಮೇಶ ನಾಯ್ಕುರ ಜಮೀನು ಹಾಗೂ ದಕ್ಷಿಣಕ್ಕೆ ಸೋನಾ ಬಾಯಿ ಇವರ ಹೊಲ ಇರುವುದು.

ನಾನು ದಾವಾ ಅಸ್ತಿಯನ್ನು ನೋಡಿದ್ದೇನೆ. ನಾನು ಹೇಳಿದ ಚೆಕ್ಕು ಬಂದಿಗೂ ವಾದ ಪತರದಲ್ಲಿ ಹೇಳಿದ ಚೆಕ್ಕು ಬಂದಿಗೂ ವ್ಯತ್ಯಾಸ ಇದೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ಹೇಳಿಕೊಟ್ಟಂತೆ ನಾನು ನ್ಯಾಯಾಲಯದ ಮುಂದೆ ಚೆಕ್ಕು ಬಂದಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೊಜ್ಯ ನಾಯ್ಕುರು ನನ್ನ ಸಂಬಂದಿಕರು ಅಂದರೆ ಸರಿಯಲ್ಲ. ಪಟ್ಟಾ ಮಂಜುರಾದ ದಿನದಿಂದ ವಾದಿಯರು ದಾವಾ ಅಸ್ತಿಯ ಸ್ವಾಧೀನದಲ್ಲಿರುವರು ಅಂದರೆ ಸರಿಯಲ್ಲ.

2019-20 ರಲ್ಲಿ ಪ್ರತಿವಾದಿಗಳಿಗೆ ಪಟ್ಟಾ ಮಂಜುರಾಗಿರುವುದು. ನಾನು ಹುಟ್ಟಿದಾಗಿನಿಂದ ವಾದಿಯರನ್ನು ನಮ್ಮ ಗ್ರಾಮಂದಲ್ಲಿ ನೋಡಿರುವುದಿಲ್ಲ ಆದ್ದರಿಂದ ಅವರು ನಮ್ಮ ಊರಿನವರು ಎಂದು ಹೇಳುತ್ತಿದ್ದೇನೆ. ನಾನು ನಮ್ಮ ಗ್ರಾಮದ ಮತದಾರ ಪಟ್ಟಿಯನ್ನು ನೋಡಿದ್ದೇನೆ. ನಮ್ಮ ಗ್ರಾಮದಲ್ಲಿ 2250 ಮತಗಳು ಇವೆ. ವಾದಿಯರು ಮೂತಃ ಬಾಪೂಜಿ ನಗರದವರು ಅಂದರೆ ಸರಿಯಲ್ಲ. ಪ್ರತಿವಾಗಳು ದಾವಾಅ ಸ್ತಿಯ ಸ್ವಾಧಿನ ಅನುಭವದಲ್ಲಿ ಇರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಸಾಕ್ಷಿಯ ಸಹಿ** 18.09.2025

ಜಾನ್ಯ ನಾಯ್ಕ ಯಾವ ದಾಖಲೆ ಸೃಷ್ಟಿಸಿರುವರು ಎಂದು ನನಗೆ ಗೊತ್ತಿಲ್ಲ. ಜಾನ್ಯ ನಾಯ್ಕ ಇವರು ತಿದ್ದು ಪಡಿ ಮಾಡಿರುವರು ಎಂದು ಹೇಳಲಾದ ದಾಖಲೆಯನ್ನು ನಾನು ನೋಡಿರುವುದಿಲ್ಲ. ಜಾನ್ಯ ನಾಯ್ಕ ಇವರಿಗೆ ಶಿಕ್ಷೆಯಾಗಿದ್ದ ಕೇಸು ನಂಬರು ನನಗೆ ಗೊತ್ತಿಲ್ಲ.

ದಾವಾ ಅಸ್ತಿ ಮತ್ತು ಪ್ರತಿವಾದಿಗಳ ಅಸ್ತಿ ಎರಡೂ ಬೇರೆ ಬೇರೆ ಆಗಿರುವುದು ಅಂದರೆ ಸರಿಯಲ್ಲ. ನನಗೆ ಈ ಕೇಸಿನ ಕುರಿತು ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಅಫಿಡವಿಟನಲ್ಲಿಎಲ್ಲಾ ವಿಷಯ ಸೃಷ್ಟಿಸಿ ಪ್ರತಿವಾದಿಗಳಿಗೆ ಸಹಾಯ ಮಾಡಲು ಮತ್ತು ವಾದಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**18-09-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 18.09.2025